ಉಪಕರಣ, ಮತ್ತು ಅಪರಾಧಗಳ ನಿಗ್ರಹಕ್ಕಾಗಿ ಪ್ರಮುಖ ಸ್ಥಳಗಳಲ್ಲಿ ಕ್ಯಾಮರಾಗಳ ಅಳವಡಿಕೆ ಹಾಗೂ ಇತರ ಅಭಿವೃದ್ಧಿ ಕಾಮಗಾರಿಗಳನ್ನು ರೂ.100 ಕೋಟಿ ವಿಶೇಷ ಅನುದಾನದಲ್ಲಿ ಕೈಗೊಳ್ಳಲಾಗಿರುತ್ತದೆ.

ಮಂಜೂರಾಗಿರುವ ಒಟ್ಟು 136 ಕಾಮಗಾರಿಗಳ ಪೈಕಿ 102 ಕೆಲಸಗಳು ಮುಕ್ತಾಯವಾಗಿರುತ್ತದೆ. ಉಳಿದ 34 ಕೆಲಸಗಳು ಪ್ರಗತಿಯಲ್ಲಿವೆ. ಅವುಗಳಲ್ಲಿ ಒಂದು ಕೆಲಸವು ರಾಜಮಾರ್ಗ ನಿರ್ಮಿಸಲು ಸಂಬಂಧಿಸಿದ್ದು, 4 ಬಾರಿ ಟೆಂಡರ್ ಕರೆದಿದ್ದು, ಈಗ ಪುನಃ ಟೆಂಡರ್ ಕರೆಯಲಾಗಿದೆ. 5 ರಸ್ತೆಗಳ ಬದಿಯಲ್ಲಿರುವ ಮರಗಿಡಗಳನ್ನು ಕಡಿಯುವುದಕ್ಕೆ ನಾಗರೀಕರ ವಿರೋಧ ಹಾಗೂ ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ ಈ ಕೆಲಸಗಳನ್ನು ಪೂರ್ಣ ಪ್ರಮಾಣದಲ್ಲಿ ಪೂರ್ಣಗೊಳಿಸಲು ಆಗಿರುವುದಿಲ್ಲ.

ಈ ಅನುದಾನ ಬಳಕೆಯಿಂದ ಮೈಸೂರು ನಗರದ ನಾಗರೀಕರಿಗೆ ಅನುಕೂಲವಾಗಿದ್ದು ಈ ಅನುದಾನವನ್ನು ನಗರಪಾಲಿಕೆಯು ಸದ್ಬಳಕೆ ಮಾಡಿಕೊಂಡಿರುತ್ತದೆ.

ಊ) ಮೈಸೂರು ಮಹಾನಗರ ಪಾಲಿಕೆಯಲ್ಲಿ 136 ಕಾಮಗಾರಿಗಳು ಮಂಜೂರಾಗಿರುತ್ತವೆ, 102 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಮತ್ತು 34 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಋ) ಇಲ್ಲ.

ಮೈಸೂರು ಲಿಡ್ಕರ್ ಉದ್ದಿಮೆಯಲ್ಲಿ ಕೆಲಸ ಮಾಡುವವರಿಗೆ ವಂಚನೆಯಾಗಿರುವ ಬಗ್ಗೆ

245 (494) ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) : ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಲಿಡ್ಕರ್ ಉದ್ದಿಮೆಯಲ್ಲಿ ಕೆಲಸ ಮಾಡುತ್ತಿರುವವರಿಗೆ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಶೇ.18 ರ ಅನುದಾನದಲ್ಲಿ 10,000 ರೂಪಾಯಿಗಳ ಸಾಧನ ಸಲಕರಣೆಗಳನ್ನು ವಿತರಣೆ ಮಾಡಲು ಕ್ರಮ ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಲಿಡ್ಕರ್ ಉದ್ದಿಮೆಯಲ್ಲಿ ಕೆಲಸ ಮಾಡುತ್ತಿರುವವರಿಗೆ ಸಾಧನ ಸಲಕರಣೆಗಳನ್ನು ನೀಡದೇ ಖಾಸಗಿ ಉದ್ದಿಮೆದಾರರೊಬ್ಬರಿಗೆ ಚೆಕ್ ಮೂಲಕ ಹಣ ಪಾವತಿಸಿದ್ದು, ಈ ಖಾಸಗಿ ಉದ್ದಿಮೆದಾರ ಸಲಕರಣೆಗಳನ್ನು ನೀಡದೇ,

10,000 ರೂಪಾಯಿಗಳ ಬದಲಾಗಿ ಕೇವಲ 7,000 ರೂಪಾಯಿಗಳನ್ನು ನೀಡಿ ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಎಷ್ಟು ಮಂದಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಯಿತು ಹಾಗೂ ಫಲಾನುಭವಿಗಳ ಆಯ್ಕೆಗೆ ಅನುಸರಿಸಿದ ಮಾನದಂಡವೇನು?

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಗಮನಕ್ಕೆ ಬಂದಿದೆ.

ಆ) ಈ ಉದ್ದೇಶಕ್ಕಾಗಿ ಲಭ್ಯವಿದ್ದ ರೂ.10 ಲಕ್ಷ ಅನುದಾನದಲ್ಲಿ 125 ಫಲಾನುಭವಿಗಳಿಗೆ ತಲಾ ರೂ.8,000/– ಮೊತ್ತದ ಸಾಮಾಗ್ರಿಗಳನ್ನು ವಿತರಿಸಲಾಗಿದೆ.

ಇ) ಲಿಡ್ಕರ್ ಸಂಸ್ಥೆಯಿಂದ ತರಬೇತಿ ಪಡೆದು ಪ್ರಮಾಣ ಪತ್ರವನ್ನು ಹಾಜರುಪಡಿಸಿದ 125 ಜನ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ.

ಬೆಳ್ತಂಗಡಿ ಕ್ಷೇತ್ರದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ

246 (116) ಶ್ರೀ ವಸಂತಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ವಿಧಾನಸಭಾ ಕ್ಷೇತ್ರದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸದೇ ಇರುವ ರೈತರ ಕೃಷಿ ಪಂಪುಸೆಟ್‌ಗಳ ಸಂಖ್ಯೆ ಎಷ್ಟು; (ಸ್ವೀಕರಿಸಿದ ಅರ್ಜಿಗಳಲ್ಲಿ)

ಆ) ಅವುಗಳಲ್ಲಿ ವಿದ್ಯುತ್ ಸಂಪರ್ಕ ನೀಡಲು ಇರುವ ತೊಂದರೆಗಳೇನು;

ಇ) ಎಷ್ಟು ಸಮಯದೊಳಗೆ ರೈತರ ನೀರಾವರಿ ಪಂಪುಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗುವುದು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರದಲ್ಲಿ ಅರ್ಜಿ ನೋಂದಾಯಿಸಿದ್ದು, ಕಂಪನಿಯಿಂದ ಕಾರ್ಯಾದೇಶ ನೀಡಿ ವಿದ್ಯುತ್ ಸಂಪರ್ಕ ಪಡೆಯದೆ ಬಾಕಿ ಇರುವ ಅರ್ಜಿಗಳ ಒಟ್ಟು ಸಂಖ್ಯೆ : 97.